INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -5, September-October, 2023,
PageNo,01-07
Peer -Reviewed, Refereed Journal

# ಪಾರಂಪರಿಕ ಕೃಷಿ ಮೇಲೆ ಜಾಗತೀಕರಣದ ಪ್ರಭಾವ ಕುರಿತ ಸ್ಥೂಲನೋಟ

*ಹಾಲಸಿದ್ದಪ್ಪ.ಸಿ.ಬಿ.[1]
**ಪ್ರೊ.ಕೊಟ್ರೇಶ್.ಎಂ.[2]

ಭಾರತವು ಹಳ್ಳಿಗಳ ದೇಶವಾಗಿದೆ.ಈ ಹಳ್ಳಿಗಳು ಪ್ರಮುಖ ಕಸುಬಾಗಿ ಕೃಷಿಯನ್ನು ಹೆಚ್ಚಿನದ್ದಾಗಿಯೇ ಹೊಂದಿರುತ್ತವೆ. ಕೃಷಿಕರು ಈ ದೇಶದ ಬೆನ್ನೆಲುಬಾಗಿದ್ದಾರೆ.ಇಲ್ಲಿಇವರಿಗೆ ಪ್ರಥಮ ಪ್ರಶಸ್ತ್ಯವಿದೆ.ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು, ಒಕ್ಕಲಿಗನು ಒಕ್ಕದಿದ್ದರೆ ಬಿಕ್ಕುವುದುಜಗವೆಲ್ಲ. ರೈತನೇ ನೇಗಿಲ ಯೋಗಿಎಂದೆಲ್ಲ ವರ್ಣಿಸಿಕೊಂಡ ರೈತನಿಗೆಇಂದು ಈ ದೇಶದಲ್ಲಿ ಎಳ್ಳಷ್ಟು ಬೆಲೆಇಲ್ಲ. ಜಾಗತೀಕರಣದ ಪ್ರಭಾವದಿಂದಾಗಿಯೇರೈತನು ನಲುಗಿ ಹೋಗಿದ್ದಾನೆ. ಹಾಗೆಯೇ, ಆರ್ಥಿಕವಾಗಿ ದಿವಾಳಿಯಾಗಿದ್ದಾನೆ. ಸಾಲದ ಶೂಲಕ್ಕೆ ಒಳಗಾಗಿದ್ದಾನೆ. ಈ ಬಾಧೆಯನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಅದು ಬಹು ರಾಷ್ಟ್ರೀಯಕಂಪನಿಯವರು ತಯಾರಿಸಿದ ಕೀಟನಾಶಕಗಳನ್ನು ಕುಡಿಯುವುದೇಆಗಿರುತ್ತದೆ. ಇದುನಿಜವಾಗಿಯೂ ಕೃಷಿ ಸಂಸ್ಕೃತಿಯೇ ನಮ್ಮ ನಾಡ ಸಂಸ್ಕೃತಿ ಈ ನೆಲದ ಸಂಸ್ಕೃತಿಯಾಗಿದ್ದು, ಪ್ರಸ್ತುತಅಧ್ಯಯನವು ಪ್ರಧಾನ ನೆಲೆಯಲ್ಲಿಯೇ ಪಾರಂಪರಿಕಕೃಷಿಯ ಉಗಮ ಮತ್ತು ಮಹತ್ವ ತಿಳಿಸುವುದರೊಂದಿಗೆ ಜಾಗತೀಕರಣದಿಂದಾಗಿಕೃಷಿಯ ಮೇಲಾಗಿರುವ ಪ್ರಭಾವವನ್ನು ಸ್ಥೂಲವಾಗಿಯೇ ಸಾದರಪಡಿಸುವಂತಹ ಬಹುಮುಖ್ಯಉದ್ದೇಶವನ್ನು ಹೊಂದಿರುತ್ತದೆಎಂದು ಹೇಳಬಹುದು.

**ಕೃಷಿ ಉಗಮ ಮತ್ತು ಮಹತ್ವ**

ಕೃಷಿಯು ಬಹಳ ಪ್ರಾಚೀನವಾದದ್ದು,ಇತಿಹಾಸ ಪೂರ್ವ ಕಾಲದಿಂದಲೂ ಮಾನವತನ್ನ ಉಳಿವಿಗಾಗಿ ಹಲವಾರು ಪ್ರಯತ್ನಗಳನ್ನು ನಡೆಸಿದ್ದಾನೆ. ಆದಿ ಹಳೆ ಶಿಲಾಯುಗದಲ್ಲಿ ಮಾನವನುಅಲೆಮಾರಿಯಾಗಿ ಬೇಟೆಯಾಡಿಜೀವನ ಸಾಗಿಸುತ್ತಿದ್ದನು. ಈ ಕಾಲಘಟ್ಟದಲ್ಲಿ ಮಾನವನುತನ್ನ

[1].ಸಂಶೋಧನಾ ವಿದ್ಯಾರ್ಥಿ,ಇತಿಹಾಸ ಮತ್ತು ಪುರಾತತ್ವಅಧ್ಯಯನ ಮತ್ತು ಸಂಶೋಧನಾ ವಿಭಾಗ,ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

[2].ಪ್ರಾಧ್ಯಾಪಕರು,ಇತಿಹಾಸ ಮತ್ತು ಪುರಾತತ್ವಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರುವಿಶ್ವವಿದ್ಯಾನಿಲಯ, ತುಮಕೂರು.

ಕೈಗೆ ಸಿಕ್ಕಿದ ಪ್ರಾಣಿಯನ್ನು, ಹಣ್ಣು ಹಂಪಲಗಳನ್ನು, ತಿಂದುತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನು.ಅನಂತರದ ನೂತನ ಶಿಲಾಯುಗವು ಮಾನವನಜೀವನದ ಮಹತ್ವದಕಾಲಘಟ್ಟವಾಗಿದ್ದು.ಅದುವೇ ಆಹಾರದ ಹುಡುಕಾಟಕ್ಕೆ ತಿರುಗಾಡದೆಒಂದುಕಡೆ ನೆಲೆ ನಿಂತು ಬದುಕುವುದನ್ನುಕಲಿತನು.ಉಜ್ಜಿ ನಯಗೊಳಿಸಿದ ಕಲ್ಲಿನ ಆಯುಧಗಳು ಈ ಕಾಲದ ಪ್ರಮುಖ ಲಕ್ಷಣವೆಆಗಿರುತ್ತದೆ.ಈಅವಧಿಯಲ್ಲಿಕೃಷಿಯನ್ನುಕಂಡುಕೊಂಡನು.ಇದೇಅಲ್ಲದೆಚಕ್ರದ ಸಹಾಯದಿಂದ ತಯಾರಿಸಿದ ಮಡಿಕೆಗಳು ತಯಾರಿಸುವುದನ್ನುಕಲಿತನು. ಹಾಗೆಯೇ, ಸಾಕು ಪ್ರಾಣಿಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡ ಇದರ ಪರಿಣಾಮವಾಗಿ ಅವನ ಬದುಕಿನಕ್ರಮ ಸುಧಾರಿಸಿತು. ಅನಂತರದ ಬೃಹತ್ ಶಿಲಾಯುಗ ಕಾಲಘಟ್ಟದಲ್ಲಿ ಮಾನವಕಬ್ಬಿಣವನ್ನುಕಂಡುಕೊಂಡಇದರ ಪರಿಣಾಮವಾಗಿ ಕೃಷಿ ಭೂಮಿ ಹೆಚ್ಚಳವಾಯಿತು. ಕಾಡು,ಗಿಡ ಮರಗಳನ್ನು ಕಡೆದುಗಟ್ಟಿಯಾದಭೂಮಿಯನ್ನು, ಬಂಜರು ಭೂಮಿಯನ್ನು, ಕೃಷಿಯ ಭೂಮಿಯಾಗಿ ಪರಿವರ್ತಿಸಲುಇದರಿಂದಆತನಿಗೆ ಸಾಧ್ಯವಾಯಿತು.

ಸಿಂಧೂ ಬಯಲಿನ ನಾಗರಿಕತೆಯಉತ್ಖನನದ ಸಮಯದಲ್ಲಿ ಸಿಕ್ಕಿರುವ ಭತ್ತದ ಹೊಟ್ಟಿನ ಅವಶೇಷಗಳು, ಅವರುಗೋಧಿ, ಮತ್ತೆ ಬಾರ್ಲಿಯನ್ನು ಬೆಳೆಯುತ್ತಿದ್ದ ಅಂಶಗಳನ್ನು ಸ್ಪಷ್ಟಪಡಿಸುತ್ತವೆ. ಇದೆಅಲ್ಲದೆಕೃಷಿಯ ಮಹತ್ವಅರಿಯಲು ಹೆಚ್ಚು ಸಹಾಯಕವಾಗಿದೆ.ಅನಂತರದಇತಿಹಾಸಕಾಲದಅವಧಿಯಲ್ಲಿಚಾರಿತ್ರಿಕವಾಗಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಬಾದಾಮಿಚಾಲುಕ್ಯರು,ರಾಷ್ಟ್ರಕೂಟರು, ಕಲ್ಯಾಣದಚಾಲುಕ್ಯರು, ಹೊಯ್ಸಳರು, ವಿಜಯನಗರದಅರಸರು ಕೃಷಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿರುವುದುಚರಿತ್ರೆಯಿಂದ ತಿಳಿದ ಸಂಗತಿಯಾಗಿದೆ. ಹೀಗೆ, ನಮ್ಮಹಿಂದಿನ ಪ್ರಾಚೀನರು ಕೃಷಿಗಾಗಿ ಸಾಕಷ್ಟು ಕೆರೆ, ಬಾವಿ, ಕಾಲುವೆಗಳನ್ನು, ನಿರ್ಮಿಸಿದ್ದರು.ಅವರು ಆ ಮೂಲಕ ಸಮಾಜದಎಲ್ಲಾ ವರ್ಗದವರಿಗೂಉದ್ಯೋಗ, ಆಹಾರ, ಆರ್ಥಿಕತೆ, ಸಾಮಾಜಿಕವಾಗಿ ನೆಮ್ಮದಿಯಿಂದಇರಲು ಬೇಕಾಗುವ ವ್ಯವಸ್ಥೆಯನ್ನು ಕಲ್ಪಿಸಿದ್ದರು.

**"ಕೆರೆಯಂಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ**
**ಮಾಡಿಸಜ್ಜಿರೆಯಾಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ**
**ನಂಬಿದರ್ಗ್ಗೆರೆವೆಟ್ಟಾಗಿರುವ ಶಿಷ್ಟರಂ ಪೊರೆಯೆನ್ನುತ್ತಿಂತೆಲ್ಲವಂ**
**ಪಿಂದೆ ತಾಂಯೆರದಳ್ಪಾಲೆರವಂದು ತೊಟ್ಟು ಕಿವಿಯೊಳ್**
**ಲಕ್ಷ್ಮೀಧರಾಮಾತ್ಯನಾ।"**

ಈ ಮೇಲೆ ಉಲ್ಲೇಖಿಸಿದ ಪದ್ಯವುಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನುಒದಗಿಸುವುದುಒಂದು ಸಾಮಾಜಿಕಜವಾಬ್ದಾರಿಯಾಗುತ್ತದೆಎಂಬುದು ಹಂಪೆಯ ಕಡಲೆಕಾಳು

ಗಣೇಶನಗುಡಿಯ ಮುಂದಿರುವಅಗುಸೆಯಲ್ಲಿರುವ ಶಾಸನದಲ್ಲಿಉಲ್ಲೇಖಿತಗೊಂಡಿರುವುದುತಿಳಿದುಬಂದಿರುತ್ತದೆ. ವಿಜಯನಗರದ ಪ್ರೌಢಪ್ರತಾಪದೇವರಾಯನ (ಕ್ರಿ.ಶ.1406–1422) ಮಂತ್ರಿಯಾದ ಲಕ್ಷ್ಮೀಧರನುಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾಳೆ. ಮಧ್ಯಕಾಲೀನ ಭಾರತದಲ್ಲಿ ನೀರಿನ ವ್ಯವಸ್ಥೆಯಾದಕೆರೆಯನ್ನುಕಟ್ಟಿಸುವುದು.ಬಾವಿಯನ್ನುತೋಡಿಸುವುದು, ಅತಿ ಮುಖ್ಯವಾದ ಕೆಲಸವಾಗಿತ್ತೆಂದುಸ್ಪಷ್ಟವಾಗುತ್ತದೆ.

ಪ್ರಾಚೀನಕಾಲದಕೃಷಿಯು ಬದುಕಿನ ಭಾಗವಾಗಿತ್ತು.ಜಾಗತೀಕರಣದ ಪ್ರಭಾವದಿಂದಾಗಿ ನಮ್ಮಕೃಷಿಕರು ವಿಮುಖರಾಗುತ್ತಿದ್ದಾರೆ. ಪಾರಂಪರಿಕ ಕೃಷಿ ನಶಿಸುತ್ತಿದೆ.ಇದರಿಂದಕೃಷಿಕರುಆಯಗಾರರು ಬೇರೊಂದುಉದ್ಯೋಗ ಹುಡುಕಿಕೊಳ್ಳುತ್ತಿದ್ದಾರೆ. ಹಳ್ಳಿಗಳು ನಗರಗಳಾಗಿ ಪರಿವರ್ತನೆಗೊಳ್ಳುತ್ತೇವೆ. ಆಧುನಿಕರಣದ ಪ್ರಭಾವದಿಂದಾಗಿಒತ್ತು ಬಿತ್ತು ಒಕ್ಕೂ ತೂರುಗಳೆಲ್ಲ ಯಂತ್ರಗಳಿಂದಲೇ ನಡೆಯುತ್ತಿದೆ. ಇದರಿಂದಾಗಿ ಕೃಷಿಗೆ ಸಂಬಂಧಿಸಿದ ಹಕ್ಕಿ ಹಾಡುಗಳು, ಜನಪದ ಹಾಡುಗಳು, ನಿಂತು ಹೋದವು.ಈ ಹಾಡುಗಳಲ್ಲಿ ಬಿಂಬಿತವಾದಕೃಷಿಕರಜೀವನ, ಸಂಸ್ಕೃತಿ, ಸಾಹಿತ್ಯ, ಸಂಪ್ರದಾಯ, ಆಚರಣೆಗಳು ಮಾಯವಾಗುತ್ತಿವೆ. ಕೃಷಿಕರ ಸ್ನೇಹ ಸೌಹಾರ್ದತೆಗೆ ಹಾಡುವ ಕಲೆ ಸಂಪೂರ್ಣವಾಗಿ ನಿಂತು ಹೋಗಿದೆ.ಅಷ್ಟೇಅಲ್ಲದೆಕೃಷಿಯುಒಂದುಉದ್ಯಮಿಯಾಗಿ ಪರಿವರ್ತಿಸಲು ಪ್ರಯತ್ನ ನಡೆಸಿರುವುದು ಬಹುರಾಷ್ಟ್ರೀಯ ಕಂಪನಿಗಳಿಂದ ಕೃಷಿ ಸಂಸ್ಕೃತಿಯು ಸುಟ್ಟು ಬೂದಿಯಾಗುವ ದಿನಗಳು ದೂರವಿಲ್ಲ ಎಂದೆನಿಸುತ್ತದೆ.

ಭಾರತದಜನಸಂಖ್ಯೆ ಹೆಚ್ಚಾಗುತ್ತಿದೆ.ವಿಶ್ವದಜನಸಂಖ್ಯೆಯಲ್ಲಿಎರಡನೇ ಸ್ಥಾನದಲ್ಲಿದೆ.ಅವರೆಲ್ಲರಿಗೂಆಹಾರವನ್ನು ಪೂರೈಸಲು ಹೆಚ್ಚು ಬೆಳೆಯಬೇಕು.ಇದುಜಾಗತೀಕರಣದಿಂದಾಗಿ ಸಾಧ್ಯವಾಗಿವಾಗಿದೆ.ಆದರೆ, ಕೃಷಿಯನ್ನುಒಂದುಉದ್ಯಮವನ್ನಾಗಿ ಮಾಡಿಕೊಂಡಾಗ ಮಾತ್ರ ಹೆಚ್ಚು ಬೆಳೆಯಲು ಸಾಧ್ಯಎಂದು ನಂಬಿಕೊಂಡು ಪಾರಂಪರಗತ ದೇಶಿಯ ತಳಿಯನ್ನು ಕೈಬಿಟ್ಟು ಹೈಬ್ರಿಡ್ ಬೀಜಗಳನ್ನು ಬಳಸಲು ತೊಡಗಿದಾಗ ಇವು ಅಧಿಕ ಇಳುವರಿ ನೀಡಲು ರಾಸಾಯನಿಕಗಳನ್ನು ಉಪಯೋಗಿಸಿದರು.ಬೇಗ ಬೆಳೆಯುವ ಬೆಳೆಗಳಿಗೆ ರೋಗಭಾದೆ ಹೆಚ್ಚು ಅದಕ್ಕಾಗಿ ಕ್ರಿಮಿನಾಶಕಗಳನ್ನು ಸಿಂಪಡಿಸಿದರು.ರೈತ ಬೀಜಗೊಬ್ಬರಔಷಧಿಗಾಗಿ ಬಹುರಾಷ್ಟ್ರೀಯ ಕಂಪನಿಗಳ ಮೊರೆ ಹೊಕ್ಕ ಅವು ಲಾಭದದಾರಿಕಂಡುಕೊಂಡವಾದರೂ, ರೈತ ಹೆಚ್ಚಿಗೆ ಬೆಳೆದ ದೇಶ ಸ್ವಾವಲಂಬನೆ ಸಾಧಿಸಿತು. ಇದನ್ನು ಹಸಿರುಕ್ರಾಂತಿಎಂದುತಿಳಿದು ನಮ್ಮ ರಾಜಕಾರಣಿಗಳು ರೈತರು ಖುಷಿಪಟ್ಟರು. ಹಸಿರು ಕ್ರಾಂತಿಯ ಅನಿವಾರ್ಯತೆಯನ್ನು ಕಂಪನಿಗಳು ವ್ಯವಸ್ಥಿತವಾಗಿ ಪ್ರಚಾರ ಮಾಡಿದವು. ಹಸಿರು ಕ್ರಾಂತಿಯ ಹರಿಕಾರನೆಂದುರೈತನನ್ನು ನಮ್ಮ ಸರ್ಕಾರ ಬೆನ್ನುತಟ್ಟಿತು. ಆದರೆ, ಹೈಬ್ರಿಡ್ ಬೀಜ ಪುನ ಬಿತ್ತನೆಗೆಯೋಗ್ಯವಲ್ಲ. ಪ್ರತಿ ಬಿತ್ತನೆಗೆ ಹೊಸ ಬೀಜಅಷ್ಟೇ ಏಕೆ ಗೊಬ್ಬರಔಷಧಿಯನ್ನು ಆ

ಕಂಪನಿಯಿಂದಖರೀದಿಸಬೇಕು. ಕಂಪನಿಗಳು ತುಂಬಾ ಲಾಭ ಪಡೆದವು. ಬೀಜ ಗೊಬ್ಬರಗಳಿಗೆ ರೈತ ಪರಾವಲಂಬಿಯಾಗಿಪರದಾಡಿದ ಸಾಲಗಾರನಾದ ಈ ದೇಶದಲ್ಲಿ ಸಾಮ್ರಾಜ್ಯಶಾಹಿ ಕೃಷಿ ನೀತಿಗಿಂತ ಸ್ವತಂತ್ರ ಭಾರತದಲ್ಲಿರೈತನಿಗೆ ಸ್ವತಂತ್ರವೇಇಲ್ಲದಂತಾಯಿತು.ಇದು ಹಸಿರು ಕ್ರಾಂತಿಯಲ್ಲ ಮಾರುಕಟ್ಟೆಯಕ್ರಾಂತಿಎಂಬುದು ನಮ್ಮ ಮುಗ್ಧ ರೈತನಿಗೆಅರ್ಥವಾಗಲೇಇಲ್ಲ. ಆಧುನಿಕ ಬೀಜಗೊಬ್ಬರ ರಾಸಾಯನಿಕಗಳು ಬರುವ ಮುನ್ನ ಭಾರತದರೈತ ಸಾಲಗಾರನಾಗಿರಲಿಲ್ಲ. ಬಹುಬೆಳೆ, ಆಧುನಿಕ ಬೆಳೆ, ವಾಣಿಜ್ಯ ಬೆಳೆ, ಆರ್ಥಿಕ ಬೆಳೆ, ಲಾಭದ ಬೆಳೆ ಎಂದೆಲ್ಲ ಈ ಕಂಪನಿಗಳು ರೈತನಿಗೆ ಹುಚ್ಚು ಹಿಡಿಸಿದವು. ತಲೆಯಲ್ಲಿ ಹಣದ ಭ್ರಮೆತುಂಬಿದವು.ರೈತ ಬೆಳೆದನಾದರೂ ಬೆಳೆದ ಬೆಳೆಗೆ ಯೋಗ್ಯ ಮಾರುಕಟ್ಟೆಇಲ್ಲದಂತೆ ಮಾಡಿದರು. ಇದುರೈತನ ಸಮಸ್ಯೆಯಆತ್ಮಹತ್ಯೆದುರಂತಕ್ಕೆ ಹಸಿರುಕ್ರಾಂತಿಯೇಕಾರಣ.ಕಸಕಡ್ಡಿ ಸಗಣಿ ಗಂಜಲಗಳನ್ನು ಸಂಗ್ರಹಿಸಿ ಸತ್ವಯುತಕೊಟ್ಟಿಗೆಗೊಬ್ಬರಅಥವಾತಿಪ್ಪೆಗೊಬ್ಬರತಯಾರಿಸುವ ಸಂಸ್ಕೃತಿಕಣ್ಮರೆಯಾಗಿದೆ.ದೇಸಿ ಬೀಜದ ತಳಿಗಳು ಇಲ್ಲ. ರಾಸಾಯನಿಕಗೊಬ್ಬರ ಕೀಟನಾಶಕಗಳ ಬಳಕೆಯಿಂದ ಉತ್ತಮ ಫಸಲುದೊರೆಯುತ್ತಾದರು ಭೂಮಿತನ್ನ ಸತ್ವ ಸಾರವನ್ನು ಕಳೆದುಕೊಂಡು ರೋಗಗ್ರಸ್ತವಾಗಿದೆ.

ಆಧುನಿಕ ಬೀಜಗೊಬ್ಬರ ರಾಸಾಯನಿಕಗಳಿಲ್ಲದೆ, ಭೂಮಿ ಬೆಳೆಯಲಾರದ ಸ್ಥಿತಿಗೆ ಬಂದಿದೆ. ದೇಶಿ ಆಹಾರಉತ್ಪತ್ತಿಯ ಪದ್ಧತಿಯಲ್ಲಿ ಹೆಚ್ಚು ಲಾಭಇಲ್ಲದಿದ್ದರೂ ನಷ್ಟವಂತೂಇರಲಿಲ್ಲ. ಭೂಮಿಯು ಬಂಜರಾಗುತ್ತಿರಲಿಲ್ಲ ಒಂದೆರಡು ಹೆಮ್ಮೆ ಆಕಳು ಸಾಕಿ ಜೀವನ ನಡೆಸುತ್ತಿದ್ದ ಕೀಟಗಳ ನಾಶಕ್ಕೆ ದನದಗಂಜಲು ಬದಲು ಕೀಟನಾಶಕಗಳನ್ನು ಬಳಸಿ ಸಗಣಿಗೊಬ್ಬರದ ಬದಲುರಾಸಾಯನಿಕಗೊಬ್ಬರವನ್ನು ಬಳಸಿ ತಾನು ವಿಷಯುಕ್ತಆಹಾರವನ್ನು ಸೇವಿಸಿ ಇತರರಿಗೂಉಣಿಸುತ್ತಿದ್ದಾನೆ. ವಿಷಯುಕ್ತ ಬೆಳೆಯನ್ನುತಿಂದದಧನಕರು ಪಕ್ಷಿಗಳು ಕೂಡ ನಾನಾರೋಗಗಳಿಗೆ ಬಲಿಯಾಗುತ್ತಿವೆ. ಕ್ರಿಮಿನಾಶಕಗಳನ್ನು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಮನುಷ್ಯರನ್ನುಕೊಲ್ಲಲೆಂದೇಕಂಡುಹಿಡಿದಿದ್ದು, ಇವುಗಳ ಮಾರಕ ಶಕ್ತಿಯನ್ನು ತಿಳಿಯಲು ಕ್ರಿಮಿ ಕೀಟಗಳ ಮೇಲೆ ಪ್ರಯೋಗಿಸಿದರು.

ಮುಂದೆ ಕ್ರಿಮಿನಾಶಕಗಳನ್ನು ಬಳಸ ತೊಡಗಿದರು.ಈ ಘನ ಘೋರ ವಿಷಮಾರುಕಟ್ಟೆಗೆ ಬರತೊಡಗಿತು.ಇವು ಜೀವಕ್ರಿಯೆಯನ್ನು ಹಸ್ತವ್ಯಸ್ತಗೊಳಿಸುತ್ತವೆ ಹಾಗೂ ವಿರೂಪಗೊಳಿಸುತ್ತಿವೆ. ಜೀವಕೋಶಗಳ ಉಸಿರಾಟ ಕ್ರಿಯೆಯನ್ನು ಸ್ಥಗಿತಗೊಳಿಸುತ್ತವೆ. ಭೀಕರಕ್ಯಾನ್ಸರ್ ಕೋಶಗಳಾಗಿ ಮಾರ್ಪಡುತ್ತಿವೆ. ದೇಹದರೋಗನಿರೋಧಕ ಶಕ್ತಿಯನ್ನು ವ್ಯತ್ಯಾಸ ಗೊಳಿಸಿದೆ.ಇದೇಅಲ್ಲದೆ ಪರಿಸರಕ್ಕೆ ಸಾಕಷ್ಟು ಹಾನಿಯನ್ನುಂಟು ಮಾಡುತ್ತದೆ.ಡಿಡಿಟಿ, ಫಾಲಿಡಾಲ್ ಮುಂತಾದವುಗಳ ಬಳಕೆಯಿಂದ ಸಾಕಷ್ಟುತೊಂದರೆಯಾಗುತ್ತದೆ. ಡಿಡಿಟಿ ನಾಶವಾಗುವುದೆಇಲ್ಲ. ಹುಲ್ಲು ಹಾಲು ಮೀನು ಧಾನ್ಯಎಲ್ಲದರ ಮೂಲಕ ಆಹಾರದಲ್ಲಿ ಬೆರೆತು ಮಾನವನ ಅಂಗಾಂಗಗಳನ್ನು ಸೇರಿಕೊಳ್ಳುತ್ತದೆ. ಇದನ್ನು ಹೊರ ಹಾಕುವ

ಸಾಮರ್ಥ್ಯದೇಹದಯಾವ ಅಂಗಾಂಗಕ್ಕೂ ಇಲ್ಲ. ಇದು ವಿಜ್ಞಾನವನ್ನೇ ನುಡಿಗಿಸಿದೆ ಹಾಗೂ ಅನೇಕ ರಾಸಾಯನಿಕ ಔಷಧಿಗಳನ್ನ ಬಣ್ಣದ ಪಾಕೆಟ್‌ಗಳಲ್ಲಿ ತಯಾರಿಸಿ ರಿಯಾಯಿತಿದರದಲ್ಲಿರೈತನಿಗೆನೀಡಲಾಗುತ್ತಿದೆ.ಇದನ್ನು ಬಳಸಿದ ಪರಿಣಾಮಗದ್ದೆಯಚರಾಚರವೆಲ್ಲ ಸತ್ತು ಹೋಗುತ್ತದೆ.ಮೀನು, ಹಾವು, ಏಡಿ, ಹಕ್ಕಿಗಳು ಸತ್ತು ಹೋದವು.ಜೀವ ವೈವಿಧ್ಯಮಯತೆ ನಾಶವಾಗುತ್ತಾತೊಡಗಿತು.ನಮ್ಮ ಪೂರ್ವಿಕರಿಗಿದ್ದ ಕಾಳಜಿ ನಮಗಿಲ್ಲ. ಜಾಗತೀಕರಣದ ಪ್ರಭಾವದಿಂದಾಗಿರೈತರು ಸಾಕಷ್ಟು ಮಲಗಿದ್ದಾರೆ.ಕೊಲ್ಲದಿದ್ದೆಇದರ ಬಗೆಗೆ ಯಾರು ಗಮನ ಹರಿಸಲೇಇಲ್ಲ. ಹೆಸರೇ ತಿಳಿಯದ ಔಷಧಿ ರಾಸಾಯನಿಕಗಳ ಸಿಂಪಡಿಕೆಯ ಕಡೆರೇಡಿಯೋ ಟಿವಿಗಳಲ್ಲಿ ಪ್ರಚಾರ ಮಾಡಲಾಗುತ್ತದೆ.

ಈಗಾಗಲೇ ಕೆಲವು ರಾಸಾಯನಿಕ ಗೊಬ್ಬರಗಳನ್ನು ಕೈ ಬಿಟ್ಟುಕುರಿ, ಧನ, ಗೊಬ್ಬರ, ಸೊಪ್ಪಿನಗೊಬ್ಬರ, ಎರೆ ಉಳಿವಿನಿಂದ ತಯಾರಿಸಿದ ಗೊಬ್ಬರದಿಂದ ಕೃಷಿ ಮಾಡುತ್ತಿದ್ದಾನೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂಇದ್ದಂತಹ ವ್ಯವಸ್ಥೆಇತ್ತು. ಭಾರತವೇಇಂತಹಗೊಬ್ಬರವನ್ನುತಯಾರಿಸಿದ ಮೊದಲ ದೇಶ. ಸ್ಥಳೀಯ ತಳಿಯನ್ನು ಜ್ಞಾನವನ್ನು ಪುನರ್ಜೀವನಗೊಳಿಸುತ್ತಿದ್ದಾನೆ. ಬೆಳ್ಳುಳ್ಳಿಯ, ರಸದನದ ಮೂತ್ರವನ್ನು ಸಾಂಪ್ರದಾಯಿಕಕೃಷಿಯಲ್ಲಿ ಬಳಸುತ್ತಿದ್ದಾನೆ. ಬೇವಿನ ಎಣ್ಣೆಯನ್ನುಉಪಯೋಗಿಸುತ್ತಿದ್ದಾನೆ. ಇವೆಲ್ಲ ಹಾನಿಕಾರಕವಲ್ಲ. ನಮ್ಮ ಪ್ರಾಚೀನರಿಗೆ ಎತ್ತುಗಳೆಂದರೆ; ಪಂಚಪ್ರಾಣ.ಎತ್ತುಗಳನ್ನು ಸಾಕಿ ಅವುಗಳ ಮೈತಿಕ್ಕಿ ಸವಾರಿಆರೈಕೆ ಮಾಡಿ, ಪೂಜಿಸುತ್ತಿದ್ದನು. ಅಂತಹ ಎತ್ತುಗಳನ್ನು ಮನೆಯ ಹಸುಗಳಿಂದ ಪಡೆಯುತ್ತಿದ್ದನು.ಅದಕ್ಕಾಗಿ ಬೀಜಊರಿಯನ್ನು ಸಾಕುತ್ತಿದ್ದ ಹಸು ಬೆದಗೆ ಬಂದಾಗ ಹಸು ಹೋರಿಯ ಸಂಯೋಗವನ್ನು ಮುಂದೆ ನಿಂತು ಮಾಡಿಸುತ್ತಿದ್ದನು.ಸುಂದರಆಕಾರದ ಯೂನಿಯುಳ್ಳ ಹೋರಿಗರ ಹುಟ್ಟುತ್ತಿತ್ತು.ಒಳ್ಳೆಯ ಎಮ್ಮೆಕರುವನ್ನುಕೋಣದಿಂದ ಪಡೆಯುತ್ತಿದ್ದನು.ಎತ್ತು– ಹೆಮ್ಮೆ ಕರುಗಳನ್ನು ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದನು.ಆದರೆಇಂದುಜಾಗತೀಕರಣದ ಪ್ರಭಾವದಿಂದಾಗಿ ವಿದೇಶಿಯ ಯಾವುದೋ ತಳಿಯ ಯಾವುದೋ ಬಣ್ಣದಗಣಿಕೀಕೃತ ವೀರ್ಯದಿಂದ ಬೆದೆ ಬಂದ ದೇಶಿಯ ಹಸುಗಳಿಗೆ ಕೃತಕಗರ್ಭಧಾರಣೆ ಮಾಡಿಸಲಾಗುತ್ತದೆ.ದೇಶಿಯ ಹಸುವಿನಲ್ಲಿ ವಿದೇಶಿಯ ವೀರ್ಯದಿಂದ ವಿಚಿತ್ರ ಬಣ್ಣದಕೋಡಿಲ್ಲದದಾಂಡಿಗಕರು ಹುಟ್ಟುತ್ತದೆ.ಇದು ಮಿಶ್ರತಳಿ.ಇಂಥವುಗಳಿಂದ ಸರಿಯಾಗಿ ಕೃಷಿ ಮಾಡಲಾಗದು.

ದೇಶಿಯ ಆಕಳು ಹಿಂದೂಗಳಿಗೆ ಪವಿತ್ರಪ್ರಾಣಿ.ಭೂಮಾತೆಯೊಂದಿಗೆಗೋಮಾತೆಯನ್ನು ಪೂಜಿಸಿದವರು ಗೌರವಸಿದವರು.ನಮ್ಮ ಪ್ರಾಚೀನರು.ಆಕಳನ್ನು ಕಟಕರಿಗೆ ಮಾರರು, ಸತ್ತರೆ ಸಮಾಧಿ ಮಾಡುವರು.ಇಂತಹ ಗೋವುಗಳನ್ನು ಬಿಟ್ಟು ಸಿದ್ಧಪಡಿಸಿದ ಆಹಾರವನ್ನುತಿನ್ನುವ ನಿಂತಲ್ಲಿ ನಿಲ್ಲುವ ಮಲಗಿದ್ದಲ್ಲಿಯೇ ಮಲಗುವ ನಿಶಾ ಜೀವಿಗಳಂತಿರುವ ಬೊಜ್ಜುದೇಹದ ಜರ್ಸಿ ಆಕಳುಗಳನ್ನು

ನ್ಯೂಜಿಲ್ಯಾಂಡ್ ಡೆನ್ಮಾರ್ಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಇದೇಅಲ್ಲದೆ ಇವುಗಳಿಂದ ಪಡೆಯುವ ಹಾಲು ಹಾಲಲ್ಲ, ಹಾಲಿನ ತರಹದದ್ರವ. ಹಾಗೂ ಅವುಗಳ ಸಗಣಿ ಗಂಜಲಗಳು ರೋಗ ನಿವಾರಕಅಲ್ಲ ಬದಲಿಗೆರೋಗಕಾರಕವಾಗಿವೆ. ಅಧಿಕ ಹಾಲು ಉತ್ಪಾದಕರ ಹೆಸರಿನಲ್ಲಿ ಇವುಗಳನ್ನು ಭಾರತಕ್ಕೆಆದರೆ ಭಾರತದವ್ಯವಸಾಯ ಸಂಸ್ಕೃತಿ ನಾಶದಲ್ಲಿ ಈ ಹಸುಗಳ ಸಗಣಿ – ಗಂಜಲಗಳ ಪಾತ್ರವೂಅಡಗಿದೆ. ಈ ಹಸುಗಳ ಹಾಲು ನಾನಾ ರೋಗಗಳ ಆಗರ ಮತ್ತು ನಿಧಾನ ವಿಷತುಂಬಿರುವ ವಸ್ತು, ಭಾರತವು ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.ಇದೊಂದುಆರ್ಥಿಕಉದ್ಯಮಿಯಾಗಿ ಬೆಳೆದಿದೆ ಕೆಲವೊಂದುರೈತ ಕುಟುಂಬಗಳು ಆರ್ಥಿಕವಾಗಿಅಭಿವೃದ್ಧಿ ಹೊಂದಿವೆ. ಮಿಶ್ರ ತಳಿಗಳ ಪ್ರಭಾವಕಡಿಮೆ ಮಾಡಿ ನಮ್ಮ ದೇಶಿಯ ತಳಿಗಳನ್ನೇ ಅಭಿವೃದ್ಧಿ ಮಾಡಬಹುದು.ಎಮ್ಮೆ ಸಾಕಾಣಿಕೆ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂಇದೆ.ಎಮ್ಮೆಯ ಹಾಲು ಪೌಷ್ಟಿಕಾಂಶಗಳಿಂದ ಕೂಡಿರುತ್ತದೆ.ಅಲ್ಲದೆರುಚಿಕಟ್ಟಾಗಿರುತ್ತದೆ.ಎಮ್ಮೆಯ ಹಾಲಿನ ಟಿ ಕಾಪಿ,, ಗಿಣ್ಣುಎಷ್ಟುಇಷ್ಟ. ಹೆಮ್ಮೆಯ ಸಗಣಿ ಗಂಜಲಗಳ ಬಗೆಯೂ ಶೋಧ ನಡೆಯಬೇಕಿದೆ.ಹಾಗೂ ಗೋವುಗಳನ್ನು ಕೇವಲ ಹಾಲಿಗೋಸ್ಕರ ಸಾಕಾದೆ ಕೃಷಿಗೆ ಪೂರಕವಾಗಿ ಸಾಕಬೇಕು.ಭಾರತದ ತಳಿಗಳಾದ ಗಿರ್,ಕರೆಜ್, ರಾಟೆ ಉಳಿಸಬೇಕು.ವಿದೇಶಿಯ ತಳಿಗಳಿಂದ ಭಾರತ ತಳಿ ನಾಶವಾಗುತ್ತಿದೆ. ಭಾರತದ ಗೋವುಗಳು ಹಾಲು ಸಕಣಿ ಗಂಜಲಗಳು ರೋಗ ನಿರೋಧಕ ಶಕ್ತಿಯು ವಿದೇಶಿ ಗೋಗಳಿಗಿಂತ ಹೆಚ್ಚಾಗಿದೆ.

ಜಾಗತೀಕರಣದ ಪ್ರಭಾವದಿಂದ ಕೃಷಿ ಮಾತ್ರವಲ್ಲ. ಮಾನವನ ಬದುಕಿನಕ್ರಮ ಸಾಕಷ್ಟು ಬದಲಾಗಿದೆ. ಇದರೊಂದಿಗೆಉದ್ಯೋಗ, ವ್ಯಾಪಾರ, ಆರ್ಥಿಕತೆ, ಸಾಮಾಜಿಕತೆ, ಧಾರ್ಮಿಕತೆ, ಸಾಂಸ್ಕೃತಿಕಜೀವನ ವಿಧಾನವು ಸಾಕಷ್ಟು ಪರಿವರ್ತನೆಯಾಗಿದೆ.ನಮ್ಮ ಪ್ರಾಚೀನರ ಪರಿಸರ ಪ್ರೇಮ, ಸ್ಥಳೀಯ ಜ್ಞಾನ ಪರಂಪರೆ, ಆರೋಗ್ಯದ ಬಗೆಗೆ ಅವರಿದ್ದಅರಿವು ನೆಮ್ಮದಿ ಜೀವನ ಮುಂತಾದ ಕೆಲವು ಸಂಗತಿಗಳು ಜಾಗತೀಕರಣದಿಂದಕಣ್ಮರೆಯಾಗುತ್ತಿದ್ದು, ಅವುಗಳನ್ನು ಉಳಿಸಬೇಕಾದ್ದು ಎಲ್ಲಾ ನಾಗರೀಕ ಪ್ರಜೆಗಳ ಆದ್ಯಕರ್ತವ್ಯವಾಗಿದೆ.

**ಆಕರ ಗ್ರಂಥಗಳು**

1. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ– 3, ಹಂಪಿ ಶಾಸನಗಳು, ಶಾಸನ ಸಂಖ್ಯೆ–69
2. ಅಂಬಳಿಕೆ ಹಿರಿಯಣ್ಣ (ಪ್ರ.ಸಂ), 2009, **ಕನ್ನಡ ವಿಷಯ ವಿಶ್ವಕೋಶಇತಿಹಾಸ ಮತ್ತು ಪುರಾತತ್ವ,** ಕುವೆಂಪು ಕನ್ನಡಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
3. ಚಿದಾನಂದ ಮೂರ್ತಿ ಎಂ.,2002, **ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ,** (ಕ್ರಿ.ಶ.450–1150) ಸಪ್ನ ಬುಕ್ ಹೌಸ್, ಬೆಂಗಳೂರು.

4. ಕೊಟ್ರಯ್ಯ ಸಿ.ಟಿ.ಎಂ. (ಆಂಗ್ಲಮೂಲ), ಧ್ರುವನಾರಾಯಣ ಎಂ., (ಕನ್ನಡಅನುವಾದ), 2001, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ದೇವರಕೊಂಡಾರೆಡ್ಡಿ (ಸಂ), 2001, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಹಂಪಿ ಶಾಸನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.